**<u>2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,</u>**

**<u>ಸಿ.ಸಿ. ಸಂಖ್ಯೆ:431/2023</u>**

**ಸಿ.ಡಬ್ಲೂ: 3 /ಪಿ.ಡಬ್ಲೂಃ 3**

**ಪ್ರಮಾಣೀಕರಿಸಿದ ದಿನಾಂಕಃ 05-08-2025**

| | |
|---|---|
| **ಹೆಸರು** | ನವನೀತ |
| **ಗಂಡನ ಹೆಸರು** | ಲೋಕೇಶ್ |
| **ವಯಸ್ಸು** | 48 ವರ್ಷ |
| **ವೃತ್ತಿ** | ಬಟ್ಟೆ ಅಂಗಡಿಯಲ್ಲಿ ಕೆಲಸ |
| **ವಾಸ** | **ಕೆಜಿಎಫ್** |

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-</u>**

1. ಚಾಸಾ1 ನನ್ನ ತಂಗಿ. ಚಾಸಾ2 ನನ್ನ ತಮ್ಮ. ಆರೋಪಿ ನನಗೆ ಗೊತ್ತು. ಅವರು ಚಾಸಾ1 ರವರ ಗಂಡನಾಗಿರುತ್ತಾರೆ.

2. ದಿಃ01.06.2020 ರಂದು ನನ್ನ ತಂಗಿ ಆದ ಚಾಸಾ1 ಮತ್ತು ಆರೋಪಿಯ ನಡುವೆ ನಾವು ಹಿರಿಯರು ನಿಶ್ಚಯಿಸಿದಂತೆ ಮದುವೆ ಆಗಿರುತ್ತದೆ. ಆ ಸಮಯದಲ್ಲಿ ಕೋವಿಡ್ ಸಾಂಕ್ರಾಮಿಕ ರೋಗ ಇದ್ದ ಕಾರಣ ನಾವು ಸರ್ಕಾರದ ನಿಯಮಾವಳಿಗಳನ್ನು ಪಾಲಿಸಿಕೊಂಡು ಸದರಿ ಮದುವೆಯನ್ನು ಮಾಡಿರುತ್ತೇವೆ. ಆ ಸಮಯದಲ್ಲಿ ಸದರಿ ಮದುವೆಯ ಅನುಮತಿ ಪತ್ರವನ್ನು ಸಹ ಆರೋಪಿಯು ಸಂಬಂದ ಪಟ್ಟ ಇಲಾಖೆ ಇಂದ ತಂದಿರುತ್ತಾರೆ. ಆ ಸಮಯದಲ್ಲಿ 1 ನೇ ಆರೋಪಿಯ ಆತನ ಕಂಪ್ಯೂಟರ್ ನಲ್ಲಿ ಮದುವೆಯ ಲಗ್ನಪತ್ರಿಕೆಯನ್ನು ಟೈಪ್ ಮಾಡಿಸಿ ಅದರ ಪ್ರಿಂಟುಗಳನ್ನು ತೆಗೆದು ತಂದು ಕೊಟ್ಟಿರುತ್ತಾರೆ. ಸದರಿ ನನ್ನ ತಂಗಿಯವರ ಮದುವೆಯು ಆರೋಪಿಯ ಮನೆಯ ಪಕ್ಕದಲ್ಲಿರುವ ನಾಗಮ್ಮ ದೇವಾಲಯದಲ್ಲಿ ನಡೆದಿರುತ್ತದೆ. ಸದರಿ ಮದುವೆ ಆದ ನಂತರ ಚಾಸಾ1 ಮತ್ತು ಆರೋಪಿಯು ಚೆನ್ನಾಗಿದ್ದು ನಂತರ ಚಾಸಾ1 ರವರು ನಮಗೆ ಆರೋಪಿಯು ಅವರಿಗೆ ತೊಂದರೆ ಕೊಡುವ ಬಗ್ಗೆ ತಿಳಿಸಿರುತ್ತಾರೆ.

3. ಆಗ ನಾವು ಚಾಸಾ1 ರವರಿಗೆ ಸ್ವಲ್ಪ ದಿನ ಸಹಿಸಲು ಹೇಳಿದ್ದು ದಾಂಪತ್ಯದಲ್ಲಿ ಅದೆಲ್ಲಾ ಸಾಮಾನ್ಯ ಎಂದು ಸಹ ಹೇಳಿರುತ್ತೇವೆ. ನಾನು ನನ್ನ ತಾಯಿಯವರ ಮನೆಯ ಸ್ವಲ್ಪ ದೂರದಲ್ಲಿ ನನ್ನ ಕುಟುಂಬದ ಜೊತೆ ವಾಸ ಮಾಡುತ್ತಿದ್ದೇನೆ. ನಂತರ ಚಾಸಾ1 ರವರು 3 ತಿಂಗಳ ಗರ್ಬಿಣಿ ಆಗಿದ್ದು ಅವಳಿಗೆ ರೆಸ್ಟ್ ಮಾಡಲು ನನ್ನ ತಾಯಿ ಮನೆಗೆ ಬಂದಿರುತ್ತಾರೆ. ನಂತರ ಚಾಸಾ1 ರವರು ಮಗುವಿನ ಪ್ರಸವದ ದಿನಾಂಕದವರೆಗೂ ನನ್ನ ತಾಯಿ ಮನೆಯಲ್ಲಿ ಇದ್ದರು. ಆ ಸಮಯದಲ್ಲಿ

ಆರೋಪಿಯು  ಚಾಸಾ1 ರವರನ್ನು ನೋಡಲು ಬಂದಿರುವುದಿಲ್ಲ. ನಂತರ ಚಾಸಾ1 ರವರಿಗೆ ಒಂದು ಗಂಡು ಮಗು ಆಗಿದ್ದು ಮಗುವನ್ನು ನೋಡಲು ಸಹ ಆರೋಪಿಯು ಬಂದಿರುವುದಿಲ್ಲ.

4. ನಂತರ ದಿಃ06.11.2022 ರಂದು ಆರೋಪಿಯು ನನ್ನ ತಂಗಿ ಆದ ಚಾಸಾ1 ರವರ ಮೇಲೆ ಪೋಲೀಸ್ ಠಾಣೆಯಲ್ಲಿ ದೂರನ್ನು ನೀಡಿದರು.  ನಂತರ ಪೋಲೀಸರು ನನ್ನನ್ನು ನನ್ನ ತಂಗಿ ಆದ ಚಾಸಾ1 ರವರನ್ನು ಮತ್ತು ನನ್ನ ತಾಯಿಯವರನ್ನು  ಠಾಣೆಗೆ ಕರೆಸಿ ವಿಚಾರಣೆ ಮಾಡಿರುತ್ತಾರೆ. ನಂತರ ಅಲ್ಲಿ ಮಾತುಕತೆ ಆಗಿ ಚಾಸಾ1 ರವರನ್ನು ಮಗುವಿನ ಜೊತೆ ಆರೋಪಿಯ ಜೊತೆ ಇರಲು ಕಳುಹಿಸಿಕೊಟ್ಟಿರುತ್ತೇವೆ. ನಂತರ ಚಾಸಾ1 ರವರು ದಿಃ07.12.2022 ರಂದು   ಆರೋಪಿಯ ಅಜ್ಜಿ ಆದ ಆರೋಗ್ಯ ಮೇರಿರವರು ದಿವಾನದಿಂದ ಏಳಲು ಪ್ರಯತ್ನಿಸಿ ಕೆಳಗಡೆ ಬಿದ್ದು ಗಾಯ ಉಂಟಾಗಿದ್ದಕ್ಕೆ ಸಂಬಂದಪಟ್ಟಂತೆ ಆರೋಪಿಯು ರಾತ್ರಿ ಚಾಸಾ1 ರವರ ಜೊತೆ ಜಗಳ ಮಾಡಿ ಅಜ್ಜಿಯನ್ನು ನೋಡಿಕೊಳ್ಳುವ ಸಲುವಾಗಿ ಅವಳನ್ನು ಮದುವೆ ಮಾಡಿಕೊಂಡು ಬಂದಿರುವುದಾಗಿ ತಿಳಿಸಿ ನಿನಗೆ ಮನೆಯಲ್ಲಿ ಜಾಗವಿಲ್ಲ ಎಂದು ತಮಿಳು ಭಾಷೆಯಲ್ಲಿ ಕೆಟ್ಟ ಮಾತುಗಳಿಂದ ಬೈದು ಅವರ ದೇಹದ ಮೇಲೆ ಹೊಡೆದಿರುವುದಾಗಿ ಕೂಡ ನನಗೆ ಮಾರನೇ ದಿನ ತಿಳಿಸಿರುತ್ತಾಳೆ.  ನಂತರ ನಾನು 3 ದಿನ ಆರೋಪಿಯು ಬಂದು ಏನಾದರೂ ಹೇಳುತ್ತಾನಾ ಎಂದು ಕಾದಿರುತ್ತೇವೆ. ಆದರೆ ಆರೋಪಿಯು ಏನು ಹೇಳಿರುವುದಿಲ್ಲ ಹಾಗೂ ಬಂದಿರುವುದಿಲ್ಲ. ನಂತರ ದಿಃ12.12.2022 ರಂದು ನನ್ನ ತಂಗಿ ಆದ ಚಾಸಾ1 ರವರು ಊರಿಗಾಂ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತಾರೆ.  ಈ ವಿಚಾರಕ್ಕೆ ಸಂಬಂದ ಪಟ್ಟಂತೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಸಾಂದರ್ಭಿಕ  ಸಾಕ್ಷಿದಾರರಾಗಿದ್ದು ತನ್ನ ಹೇಳಿಕೆಯ ಕೆಲವು ಅಂಶಗಳಿಗೆ  ವಿರುದ್ಧವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ  ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-</u>**

3. ನನ್ನ ತಂಗಿ ಆದ ಚಾಸಾ1 ರವರು ಫೋನ್ ಮಾಡಿ ಆರೋಪಿಯು ಅವಳಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ತೊಂದರೆ ಕೊಡುವ ಬಗ್ಗೆ ಹೇಳಿರುತ್ತಾಳೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ1 ರವರು ಆರೋಪಿಯು ಅವರಿಗೆ ಕೆಟ್ಟ ಮಾತುಗಳಿಂದ ಬೈಯುವ ಬಗ್ಗೆ ಕೂಡ ಹೇಳಿರುತ್ತಾಳೆ ಎಂದರೆ ಸರಿ. ದಿಃ07.12.2022 ರಂದು ಆರೋಪಿಯು ರಾತ್ರಿ 8.00 ಗಂಟೆಗೆ ನನ್ನ ತಂಗಿ ಆದ ಚಾಸಾ1 ರವರಲ್ಲಿ ಜಗಳ ಮಾಡಿರುವ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ.ಸ

**ಪಾಟೀವಾಲು ಆರೋಪಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು**

**ಜೆ.ಎಂ.ಎಫ್.ಸಿ, ಕೆಜಿಎಫ್.**